ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	2002
ವಿಧಾನ ಪರಿಷತ್ತಿನ ಸದಸ್ಯರ ಹೆಸರು	:	ಶ್ರೀಮತಿ ಭಾರತಿ ಶೆಟ್ಟಿ (ನಾಮ ನಿರ್ದೇಶನ ಹೊಂದಿದವರು)
ಉತ್ತರಿಸುವ ದಿನಾಂಕ	:	16/03/2021
ಉತ್ತರಿಸುವ ಸಚಿವರು	:	ಲೋಕೋಪಯೋಗಿ ಸಚಿವರು.

<table>
<tr><th>ಕ್ರ.ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಲೋಕೋಪಯೋಗಿ ಇಲಾಖೆಯು ರಾಜ್ಯದಲ್ಲಿ ಎಷ್ಟು ಸರ್ಕ್ಯೂಟ್ ಹೌಸ್ ಹಾಗೂ ಪ್ರವಾಸಿ ಮಂದಿರಗಳನ್ನು ನಿರ್ಮಿಸಿದೆ.</td><td>ರಾಜ್ಯದಲ್ಲಿ ಲೋಕೋಪಯೋಗಿ ಇಲಾಖೆಯು 4 ವಲಯಗಳ ವ್ಯಾಪ್ತಿಯಲ್ಲಿ ನಿರ್ಮಿಸಿರುವ ಸರ್ಕ್ಯೂಟ್ ಹೌಸ್ ಹಾಗೂ ಪ್ರವಾಸಿ ಮಂದಿರಗಳ ವಿವರ ಈ ಕೆಳಕಂಡಂತಿದೆ:
<table>
<tr><th>ಕ್ರ. ಸಂ.</th><th>ವಲಯ</th><th>ಸರ್ಕ್ಯೂಟ್ ಹೌಸ್</th><th>ಪ್ರವಾಸಿ ಮಂದಿರ</th></tr>
<tr><td>01</td><td>ದಕ್ಷಿಣ ವಲಯ</td><td>13</td><td>68</td></tr>
<tr><td>02</td><td>ಉತ್ತರ ವಲಯ</td><td>64</td><td>136</td></tr>
<tr><td>03</td><td>ಈಶಾನ್ಯ ವಲಯ</td><td>24</td><td>145</td></tr>
<tr><td>04</td><td>ಕೇಂದ್ರ ವಲಯ</td><td>01</td><td>73</td></tr>
<tr><td></td><td>ಒಟ್ಟು</td><td>102</td><td>422</td></tr>
</table></td></tr>
<tr><td>ಆ)</td><td>ಸರ್ಕ್ಯೂಟ್ ಹೌಸ್ ನಿರ್ಮಾಣದ ಉದ್ದೇಶಗಳೇನು ?</td><td>ಗಣ್ಯವ್ಯಕ್ತಿಗಳು, ಹಿರಿಯ ಅಧಿಕಾರಿ ವರ್ಗದವರು /ಸಿಬ್ಬಂದಿ ಕಾರ್ಯನಿಮಿತ್ತ ಪ್ರವಾಸದಲ್ಲಿರುವಾಗ ತಾತ್ಕಾಲಿಕವಾಗಿ ತಂಗಲು ಸರ್ಕ್ಯೂಟ್ ಹೌಸ್ ನಿರ್ಮಾಣ ಮಾಡಲಾಗಿದೆ.</td></tr>
<tr><td>ಇ)</td><td>ಸರ್ಕ್ಯೂಟ್ ಹೌಸ್‌ನ ಕೊಠಡಿಗಳಲ್ಲಿ ಎರಡು ಡಬಲ್ ಬೆಡ್ ಮಂಚ ಇಡಲು ಕಾರಣಗಳೇನು; (ಉದಾ: ಶಿವಮೊಗ್ಗ ಸರ್ಕ್ಯೂಟ್ ಹೌಸ್)</td><td>ಸರ್ಕ್ಯೂಟ್ ಹೌಸ್‌ನ ಕೊಠಡಿಯ ಅಳತೆಗೆ ಅನುಗುಣವಾಗಿ ಹಾಗೂ ಗಣ್ಯವ್ಯಕ್ತಿಗಳು / ಸರ್ಕಾರಿ ಅಧಿಕಾರಿಗಳ ಅನುಕೂಲಕ್ಕಾಗಿ ಡಬಲ್ ಬೆಡ್ ನ್ನು ಒದಗಿಸಲಾಗಿರುತ್ತದೆ.</td></tr>
<tr><td>ಈ)</td><td>ಯಾವುದೇ ಕಟ್ಟಡದ ವಿನ್ಯಾಸದ ಮೂಲ ಉದ್ದೇಶಗಳೇನು;</td><td>ಅವಶ್ಯಕತೆಗನುಗುಣವಾಗಿ ಮುಖ್ಯ ವಾಸ್ತುಶಿಲ್ಪಿ ರವರು ಸಲ್ಲಿಸುವ ವಿನ್ಯಾಸದಂತೆ ಕಟ್ಟಡವನ್ನು ನಿರ್ಮಾಣ ಮಾಡಲಾಗುತ್ತಿದ್ದು, ಅತ್ಯಂತ ಕಡಿಮೆ ವೆಚ್ಚದಲ್ಲಿ ಅನುಕೂಲಕರವಾಗಿ ಹಾಗೂ ಸುರಕ್ಷಿತವಾಗಿ ನಿರ್ಮಿಸುವುದಾಗಿರುತ್ತದೆ.</td></tr>
<tr><td>ಉ)</td><td>ಸದರಿ ಉದ್ದೇಶಗಳಿಗೆ ಸದರಿ ವಿನ್ಯಾಸಗಳು ಯಾವ ರೀತಿಯಲ್ಲಿ ಭಂಗವಾಗಿದೆ; (ಸಂಪೂರ್ಣ ವಿವರ ಒದಗಿಸುವುದು)</td><td>ರಾಜ್ಯದಲ್ಲಿ ನಿರ್ಮಿಸಲಾಗಿರುವ ಸರ್ಕ್ಯೂಟ್ ಹೌಸ್ ಹಾಗೂ ಪ್ರವಾಸಿ ಮಂದಿರಗಳ ಕಟ್ಟಡಗಳನ್ನು ಸಕ್ಷಮ ಪ್ರಾಧಿಕಾರದ ಅನುಮೋದಿತ ವಿನ್ಯಾಸದಂತೆ, ನಿರ್ಮಿಸಲಾಗುತ್ತಿದ್ದು, ಯಾವುದೇ ರೀತಿಯ ಭಂಗ ಉಂಟಾಗಿರುವುದಿಲ್ಲ.</td></tr>
</table>

ಊ)	ಸರ್ಕ್ಯೂಟ್ ಹೌಸ್, ಸರ್ಕಾರಿ ವೈದ್ಯಕೀಯ ಕಾಲೇಜುಗಳ ಪೋರ್ಟಿಕೋಗಳ ಮೇಲೆ ಅಂಟುವ ಜೇಡರಬಲೆ ಹಾಗೂ ಧೂಳನ್ನು ಯಾವ ರೀತಿ ಮತ್ತು ಎಷ್ಟು ದಿನಗಳಿಗೊಮ್ಮೆ ಸ್ವಚ್ಛಗೊಳಿಸುವ ಉದ್ದೇಶ, ವಿನ್ಯಾಸ ಹೊಂದಿದೆ? (ವಿವರ ಒದಗಿಸುವುದು)	ಸರ್ಕ್ಯೂಟ್ ಹೌಸ್‌ಗಳ ನಿರ್ವಹಣೆಗಾಗಿ ಪ್ರತಿ ವರ್ಷ ವಾರ್ಷಿಕ ನಿರ್ವಹಣೆಗಾಗಿ ಬಿಡುಗಡೆಗೊಳಿಸಲಾದ ಅನುದಾನದಡಿ ನಿರ್ವಹಣೆ ಮಾಡಲಾಗುತ್ತಿದ್ದು, ಕಾಲಕಾಲಕ್ಕೆ ಸ್ವಚ್ಛಗೊಳಿಸಲಾಗುತ್ತಿದೆ.

(ಸಂಖ್ಯೆ: ಲೋಇ 10 ಬಿಎಲ್ ಕ್ಯೂ 2022)

(ಸಿ.ಸಿ. ಪಾಟೀಲ)
ಲೋಕೋಪಯೋಗಿ ಸಚಿವರು.